# ಸಿನಿಮಾ ಪ್ರಶಸ್ತಿಗಳ ಸಂಭ್ರಮ

ಕನ್ನಡದ 'ಕೂರ್ಮಾವತಾರ' ಚಿತ್ರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ 2011ನೇ ಸಾಲಿನ 'ರಜತ ಕಮಲ' ಪ್ರಶಸ್ತಿ ಲಭಿಸಿದ್ದು, ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂದು ಘೋಷಿತವಾಗಿದೆ. ಹಾಗೆಯೇ ಕರ್ನಾಟಕದ್ದೇ ಒಂದು ಭಾಷೆಯಾದ ಬ್ಯಾರಿ ಭಾಷೆಯ 'ಬ್ಯಾರಿ' ಚಿತ್ರಕ್ಕೆ ಅತ್ಯುನ್ನತ 'ಸ್ವರ್ಣ ಕಮಲ' ಪ್ರಶಸ್ತಿ ಲಭಿಸಿದೆ. ಕರ್ನಾಟಕದ ಮಟ್ಟಿಗೆ ಎರಡೂ ಹೆಮ್ಮೆಯ ಸಂಗತಿಗಳೇ. ಕನ್ನಡದ ಹೆಮ್ಮೆಯ ಚಿತ್ರನಿರ್ದೇಶಕ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿರುವ, ಬಸಂತ್‌ಕುಮಾರ್ ಪಾಟೀಲ್ ನಿರ್ಮಿಸಿರುವ 'ಕೂರ್ಮಾವತಾರ' ಇನ್ನೂ ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಿಲ್ಲ. ಕನ್ನಡಿಗರೇ ಆದ ಅಲ್ತಾಫ್ ಹುಸೇನ್ ನಿರ್ಮಿಸಿರುವ 'ಬ್ಯಾರಿ' ಚಿತ್ರ ಮಂಗಳೂರಿನಲ್ಲಿ ಮಾತ್ರ ಥಿಯೇಟರ್‌ನಲ್ಲಿ ಬಿಡುಗಡೆಯಾಗಿದ್ದು, ಬೆಂಗಳೂರು ಸಹಿತ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದೆ. ಕರ್ನಾಟಕದ ಕರಾವಳಿಯ ಬಹುತೇಕ ಮುಸ್ಲಿಮರು ಮಾತನಾಡುವ ಬ್ಯಾರಿ ಭಾಷೆಯಲ್ಲಿ ನಿರ್ಮಾಣವಾದ ಮೊದಲ ಚಿತ್ರಕ್ಕೇ 'ಸ್ವರ್ಣ ಕಮಲ' ಲಭಿಸಿರುವುದು (ಮರಾಠಿ ಚಿತ್ರದ ಜತೆಗೆ ಹಂಚಿಕೊಂಡಿದ್ದರೂ) ಗಮನಾರ್ಹ ಸಂಗತಿ. ಕನ್ನಡದ ಇನ್ನಷ್ಟು ಚಿತ್ರಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಸಿಗುವ ನಿರೀಕ್ಷೆ ಇತ್ತು. ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಭಾಗೀರತಿ' ಚಿತ್ರಕ್ಕೆ ಮತ್ತು ನಾಯಕಿ ಪಾತ್ರಕ್ಕೂ ಪ್ರಶಸ್ತಿ ಸಿಗಬಹುದೆಂಬ ಮಾತುಗಳು ಕೇಳಿಬಂದಿದ್ದವು. ಕನ್ನಡದ ಐದು ಚಿತ್ರಗಳು ಪ್ರಶಸ್ತಿ ಸಮಿತಿಯ ಅಂತಿಮ ಹಂತದ ಚರ್ಚೆಗೆ ಬಂದಿದ್ದವು. ಈ ಹಿಂದೆಯೂ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಕನ್ನಡದ ಚಿತ್ರಗಳು ದೊಡ್ಡ ಪಾಲು ಪಡೆಯುತ್ತಿದ್ದುದರಿಂದ ಈ ನಿರೀಕ್ಷೆ ಅಸಹಜವೇನೂ ಆಗಿರಲಿಲ್ಲ. ಆದರೆ ಆ ನಿರೀಕ್ಷೆ ಹುಸಿಯಾಯಿತು.

'ಸ್ವರ್ಣಕಮಲ' ಪ್ರಶಸ್ತಿ ಗೆದ್ದ ಬ್ಯಾರಿ ಸಿನಿಮಾದ ಮುಖ್ಯ ತಾರಾಗಣ ಮತ್ತು ತಾಂತ್ರಿಕವರ್ಗದಲ್ಲಿ ಮಲಯಾಳಿಗಳದ್ದೇ ಮೇಲುಗೈ. ಬ್ಯಾರಿ ಭಾಷೆಯ ಜತೆಗಿನ ಮಲಯಾಳಂನ ಗಡಿಭಾಗದ ಕೊಡುಕೊಳ್ಳುವಿಕೆಯೂ ಇದಕ್ಕೆ ಕಾರಣವಿರಬಹುದು. 'ಈ ಚಿತ್ರದ ಕಥೆ ನನ್ನದು. ಕಥೆಯನ್ನು ಕದ್ದು ಸಿನಿಮಾ ಮಾಡಿದ್ದಾರೆ' ಎಂದು ಕನ್ನಡದ ಹಿರಿಯ ಸಾಹಿತಿ ಸಾರಾ ಅಬೂಬಕರ್ ಆರೋಪಿಸಿದ್ದಾರೆ. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ' ಕಥೆಯಲ್ಲಿ ಬರುವ ಪಾತ್ರಗಳ ಹೆಸರು ಮತ್ತು ಹಲವು ಸನ್ನಿವೇಶಗಳು ಚಿತ್ರದಲ್ಲೂ ಇವೆ. ಕ್ಲೈಮ್ಯಾಕ್ಸ್ ಮಾತ್ರ ಬದಲಾಗಿದೆ. 'ಚಂದ್ರಗಿರಿಯ ತೀರದಲ್ಲಿ' ಕನ್ನಡದ ಸಾಹಿತ್ಯಲೋಕದಲ್ಲಿ ಒಂದು ಕಾಲದಲ್ಲಿ ದೊಡ್ಡ ಸಂಚಲನ ಮೂಡಿಸಿತ್ತು. ಲೇಖಕಿ ಮತ್ತು ಚಿತ್ರತಂಡದ ಮಧ್ಯೆ 'ಕೊಡುಕೊಳ್ಳುವ' ವಿಷಯದಲ್ಲಿ ವಿವಾದ ಮೂಡಿದ್ದು ಕೊನೆಗೆ ಅದು ಕೋರ್ಟ್ ಮೆಟ್ಟಿಲೇರಿ, ಚಿತ್ರದ ಬಿಡುಗಡೆಗೆ ತಡೆಯೊಡ್ಡಲು ಕೋರ್ಟ್ ನಿರಾಕರಿಸಿದ್ದೂ ಆಯಿತು. ಚಲನಚಿತ್ರ ವಾಣಿಜ್ಯ ಮಂಡಲಿಯೂ ವಿವಾದವನ್ನು ಪರಿಹರಿಸಲು ಯತ್ನಿಸಿ ವಿಫಲಗೊಂಡಿತ್ತು. ವಿವಾದ ಏನೇ ಇದ್ದರೂ ಸೃಜನಶೀಲ ಲೇಖಕರೊಬ್ಬರ ಬರವಣಿಗೆಯ ಹಕ್ಕಿಗೆ ಅನ್ಯಾಯವಾಗಿದೆ ಎನ್ನುವುದು ನಿಜ. ಸಾಹಿತ್ಯ ಮತ್ತು ಸಿನಿಮಾ ಎರಡೂ ಸೃಜನಶೀಲ ಅಭಿವ್ಯಕ್ತಿ ಮಾಧ್ಯಮಗಳೇ ಆಗಿರುವಾಗ ಪರಸ್ಪರ ಗೌರವ ಇಟ್ಟುಕೊಳ್ಳಬೇಕಾದದ್ದು ಬಹಳ ಮುಖ್ಯ.

'ಕೂರ್ಮಾವತಾರ' ಚಿತ್ರವನ್ನು ನೋಡುವ ಭಾಗ್ಯ ಇನ್ನೂ ಕನ್ನಡಿಗರಿಗೆ ಲಭಿಸಿಲ್ಲ. ನಿರ್ಮಾಪಕರಾಗಿ ಕನ್ನಡಕ್ಕೆ ಹಲವು ಪ್ರಶಸ್ತಿಗಳನ್ನು ತಂದುಕೊಟ್ಟಿರುವ ಹೆಮ್ಮೆ ಬಸಂತಕುಮಾರ್ ಪಾಟೀಲರದ್ದು. ಆದರೆ ಅವರು ತಮ್ಮ ಯಾವುದೇ ಚಿತ್ರವನ್ನು ಕನ್ನಡದ ಪ್ರೇಕ್ಷಕರಿಗೆ ತೋರಿಸುವ ಬಗ್ಗೆ ಅಂತಹ ಉತ್ಸಾಹ ಹೊಂದಿಲ್ಲ ಎನ್ನುವುದೂ ನಿಜ. ಕೇವಲ ಒಂದೇ ಪ್ರಿಂಟ್ ಇಟ್ಟುಕೊಂಡು ಅದನ್ನು ಪ್ರಶಸ್ತಿ ಸಮಿತಿಗೆ ಮತ್ತು ದೇಶ ವಿದೇಶಗಳ ಚಿತ್ರೋತ್ಸವಕ್ಕೆ ಒಯ್ಯುವ ಪಾಟೀಲರು ಕೊನೆಯದಾಗಿ ಕನ್ನಡಿಗರಿಗೆ ತೋರಿಸುತ್ತಾರೆ. ಕನ್ನಡದ ಸಶಕ್ತ ಕಥೆಗಾರ ಕುಂ. ವೀರಭದ್ರಪ್ಪ ಅವರ ಕಥೆಯನ್ನು ಆಧರಿಸಿದ ಈ ಚಿತ್ರಕ್ಕೆ ಸ್ವರ್ಣಕಮಲವೇ ಬರಬೇಕಿತ್ತು ಎನ್ನುವವರಿದ್ದಾರೆ. ಕುಂ.ವೀ ಅವರ ಆ ಕಥೆಯನ್ನು ಕನ್ನಡ ಸಾಹಿತ್ಯ ಲೋಕ ಅಚ್ಚರಿ ಮತ್ತು ಮೆಚ್ಚುಗೆಯಿಂದಲೇ ಸ್ವೀಕರಿಸಿದೆ. ಈ ಹಿಂದೆಯೂ ಕನ್ನಡದ ಇಂತಹ ಸಶಕ್ತ ಕಥೆಗಳನ್ನು ಪರಿಣಾಮಕಾರಿಯಾಗಿ ದೃಶ್ಯ ಮಾಧ್ಯಮಕ್ಕೆ ಅಳವಡಿಸಿದ್ದ ಗಿರೀಶ್ ಕಾಸರವಳ್ಳಿಯವರು ಇದನ್ನೂ ಚೆನ್ನಾಗಿಯೇ ತೆಗೆದಿರಬೇಕು. ಸದ್ಯಕ್ಕೆ ಕನ್ನಡಿಗರು ಹಾಗೆಂದು ಊಹೆ ಮಾಡಬಹುದಷ್ಟೆ.

ಪ್ರಶಸ್ತಿ ಪಡೆದು ರಾಷ್ಟ್ರ, ರಾಜ್ಯಮಟ್ಟದಲ್ಲಿ ಹೆಸರು ಮಾಡುವ ಇಂತಹ ಕನ್ನಡ ಚಿತ್ರಗಳನ್ನು ಸಿನಿಮಾ ಪೂರ್ಣಗೊಂಡ ತಕ್ಷಣವೇ ನೋಡುವ ಭಾಗ್ಯ ಕನ್ನಡಿಗರಿಗೆ ಎಂದು ಬರುತ್ತದೋ? ಕೇವಲ ವಿತರಕರನ್ನು ದೂರಿ ಪ್ರಯೋಜನವಿಲ್ಲ. ಒಳ್ಳೆಯ ಚಿತ್ರಗಳನ್ನು ಜನರ ಬಳಿಗೆ ಖುದ್ದಾಗಿ ಒಯ್ದು ಯಶಸ್ಸು ಪಡೆದ ಬರಗೂರು ರಾಮಚಂದ್ರಪ್ಪನವರ ತರಹದ ನಿರ್ದೇಶಕರು ನಮ್ಮಲ್ಲಿ ಇದ್ದಾರೆ. ಕಾಸರವಳ್ಳಿಯವರ ಚಿತ್ರಗಳೂ ಹಾಗೆಯೇ ಜಿಲ್ಲೆಗಳ ಮಟ್ಟಕ್ಕೂ ತಕ್ಷಣ ತಲುಪಬೇಕು ಎನ್ನುವ ಆಶಯ ತಪ್ಪೇನಲ್ಲ.

■ ಬಿ.ಎಂ.ಹನೀಫ್

ಪ್ರಶಸ್ತಿ ಪಡೆದು ರಾಷ್ಟ್ರ, ರಾಜ್ಯಮಟ್ಟದಲ್ಲಿ ಹೆಸರು ಮಾಡುವ ಇಂತಹ ಕನ್ನಡ ಚಿತ್ರಗಳನ್ನು ಸಿನಿಮಾ ಪೂರ್ಣಗೊಂಡ ತಕ್ಷಣವೇ ನೋಡುವ ಭಾಗ್ಯ ಕನ್ನಡಿಗರಿಗೆ ಎಂದು ಬರುತ್ತದೋ? ಕೇವಲ ವಿತರಕರನ್ನು ದೂರಿ ಪ್ರಯೋಜನವಿಲ್ಲ.

